**National**
**Kannada**
**14.09.2026 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಸೆಪ್ಟೆಂಬರ್ 17 ರಿಂದ ದೆಹಲಿಯಲ್ಲಿ ಮೂರು ದಿನಗಳ ಸೆಮಿಕಂಡಕ್ಟರ್ ಸಮ್ಮೇಳನಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
2. ದೇಶದಲ್ಲಿ ಹಲವು ಭಾಷೆಗಳಿದ್ದರೂ ಭಾರತೀಯ ಭಾವನೆ ಹಾಗೂ ರಾಷ್ಟ್ರದ ಧ್ವನಿ ಒಂದೇ ಆಗಿರಬೇಕು – ಕೇಂದ್ರ ಗೃಹ ಸಚಿವ ಅಮಿತ್ ಶಾ
3. ಸಾಮಾಜಿಕ, ಆರ್ಥಿಕ ಅಭಿವೃದ್ಧಿ, ರಾಷ್ಟ್ರೀಯ ಭದ್ರತೆಗೆ ಇಂಧನ ಭದ್ರತೆ ನಿರ್ಣಾಯಕ ಅಡಿಪಾಯ; ಬ್ರಿಕ್ಸ್ ನಾಯಕರ ಪ್ರತಿಪಾದನೆ
4. ಸೈಬರ್ ಹಣಕಾಸು ವಂಚನೆ ತಡೆಗೆ ಹೊಸ ನಿಯಮ ರೂಪಿಸಲು ಮುಂದಾದ ಆರ್‌ಬಿಐ
5. ಮೆಕ್ಸಿಕೋದಲ್ಲಿ ನಡೆದ ವಿಶ್ವ ಬಿಲ್ಲುಗಾರಿಕೆಯಲ್ಲಿ ಚಿನ್ನ ಗೆದ್ದು, ಮಹತ್ವದ ಸಾಧನೆ ಮಾಡಿದ ಧೀರಜ್ ಬೊಮ್ಮದೇವರ

---

ಭಾರತದ ಪ್ರಮುಖ ಸೆಮಿಕಂಡಕ್ಟರ್ ಮತ್ತು ವಿದ್ಯುನ್ಮಾನ ಸಮ್ಮೇಳನ ಹಾಗೂ ಪ್ರದರ್ಶನವಾದ ಸೆಮಿಕಾನ್ ಇಂಡಿಯಾ 2026 ರ ಐದನೇ ಆವೃತ್ತಿಯು ಸೆಪ್ಟೆಂಬರ್ 17 ರಿಂದ 19 ರವರೆಗೆ ನವದೆಹಲಿಯ ಯಶೋಭೂಮಿಯಲ್ಲಿ ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಈ ಸಮ್ಮೇಳನ ಉದ್ಘಾಟಿಸಲಿದ್ದಾರೆ. ಮೂರು ದಿನಗಳ ಉನ್ನತ ಮಟ್ಟದ ಚರ್ಚೆಗಳು ಮತ್ತು ಭಾರತದ ವೇಗವಾಗಿ ವಿಸ್ತರಿಸುತ್ತಿರುವ ಸೆಮಿಕಂಡಕ್ಟರ್ ಮತ್ತು ವಿದ್ಯುನ್ಮಾನ ಪರಿಸರ ವ್ಯವಸ್ಥೆಗೆ ಈ ಸಮ್ಮೇಳನ ಅತ್ಯಂತ ಮಹತ್ವದ್ದಾಗಿದೆ.

ಭಾರತ ಸೆಮಿಕಂಡಕ್ಟರ್ ಮಿಷನ್, ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಸೆಮಿಕಂಡಕ್ಟರ್ ಮತ್ತು ವಿದ್ಯುನ್ಮಾನ ವಿನ್ಯಾಸ, ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಪ್ರತಿನಿಧಿಸುವ ಜಾಗತಿಕ ಕೈಗಾರಿಕಾ ಸಂಘವಾದ ಸೆಮಿ ಜಂಟಿಯಾಗಿ ಈ ಸಮ್ಮೇಳನ ಆಯೋಜಿಸಿದೆ.

ಜಾಗತಿಕ ಸೆಮಿಕಂಡಕ್ಟರ್ ಮತ್ತು ವಿದ್ಯುನ್ಮಾನ ಕಂಪನಿಗಳು, ಉದ್ಯಮ ನಾಯಕರು, ನೀತಿ ನಿರೂಪಕರು, ಹೂಡಿಕೆದಾರರು, ಸಂಶೋಧಕರು, ಶೈಕ್ಷಣಿಕ ಸಂಸ್ಥೆಗಳು, ನವೋದ್ಯಮಗಳು ಮತ್ತು ವಿದ್ಯಾರ್ಥಿಗಳನ್ನು ಒಂದು ಸಾಮಾನ್ಯ ವೇದಿಕೆಯಲ್ಲಿ ಒಟ್ಟುಗೂಡಿಸಿ ವಿಚಾರ ವಿನಿಮಯ ಮಾಡಿಕೊಳ್ಳಲು, ಪಾಲುದಾರಿಕೆಗಳನ್ನು ರೂಪಿಸಲು ಮತ್ತು ಭಾರತದ ಸೆಮಿಕಂಡಕ್ಟರ್ ಮತ್ತು ವಿದ್ಯುನ್ಮಾನ ಪರಿಸರ ವ್ಯವಸ್ಥೆಯ ಭವಿಷ್ಯವನ್ನು ರೂಪಿಸಲು ಸಹಾಯ ಮಾಡುತ್ತವೆ.

ಬಲವಾದ ನೀತಿ, ಬೆಳೆಯುತ್ತಿರುವ ಉದ್ಯಮ ಮತ್ತು ವಿಶ್ವಾಸಾರ್ಹ ಮತ್ತು ಸೆಮಿಕಂಡಕ್ಟರ್ ಪೂರೈಕೆ ಸರಪಳಿಗಳಿಗೆ ಹೆಚ್ಚುತ್ತಿರುವ ಜಾಗತಿಕ ಬೇಡಿಕೆಯು ಭಾರತವನ್ನು ಜಾಗತಿಕ ಸೆಮಿಕಂಡಕ್ಟರ್ ಮೌಲ್ಯ ಸರಪಳಿಯಲ್ಲಿ ಹೆಚ್ಚು ಪ್ರಮುಖ

---

ಭಾರತದ ಸಂಸ್ಕೃತಿ ಮತ್ತು ಸಾಹಿತ್ಯ ಕಮಲದ ಹೂವಿನಂತಿದ್ದು, ಪ್ರತಿಯೊಂದು ಪ್ರಾದೇಶಿಕ ಭಾಷೆಯೂ ಅದರ ಒಂದೊಂದು ದಳವನ್ನು ಪ್ರತಿನಿಧಿಸುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಒಂದು ದಳ ಕಳೆದುಹೋದರೂ ಇಡೀ ಕಮಲದ ಸೌಂದರ್ಯ ಕುಂದುತ್ತದೆ. ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಸೂಕ್ತ ಗೌರವ ಮತ್ತು ಘನತೆಯನ್ನು ಖಾತ್ರಿಪಡಿಸುವ ಜೊತೆಗೆ ಹಿಂದಿ ಭಾಷೆಯು ಕೇಂದ್ರ ಪಾತ್ರವನ್ನು ನಿರ್ವಹಿಸಬೇಕು ಎಂದಿದ್ದಾರೆ.

ನವಿ ಮುಂಬೈನಲ್ಲಿ ಎರಡು ದಿನಗಳ 'ಹಿಂದಿ ದಿವಸ್ ' ಮತ್ತು ಆರನೇ 'ಅಖಿಲ ಭಾರತೀಯ ರಾಜಭಾಷಾ ಸಮ್ಮೇಳನ'ವನ್ನು ಉದ್ಘಾಟಿಸಿ ಮಾತನಾಡಿ, ಭಾರತದಲ್ಲಿ ಅನೇಕ ಭಾಷೆಗಳು ಮತ್ತು ಉಪಭಾಷೆಗಳಿದ್ದರೂ, ಭಾರತೀಯ ಭಾವನೆ ಮತ್ತು ರಾಷ್ಟ್ರದ ಧ್ವನಿ ಒಂದೇ ಆಗಿರಬೇಕು. ಭಾಷಾ ವೈವಿಧ್ಯತೆಯು ದೇಶದ ಶಕ್ತಿಯಾಗಿದ್ದು, ಹಿಂದಿ ಭಾಷೆಯು ವಿವಿಧ ಭಾರತೀಯ ಭಾಷೆಗಳ ನಡುವೆ ಪರಿಣಾಮಕಾರಿ ಸಂವಹನ ಸೇತುವೆಯಾಗಿ ಕಾರ್ಯನಿರ್ವಹಿಸುವ ಮೂಲಕ ರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸುತ್ತದೆ ಎಂದು ಅವರು ತಿಳಿಸಿದರು.

---

ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ, ರಾಷ್ಟ್ರೀಯ ಭದ್ರತೆ ಮತ್ತು ಎಲ್ಲಾ ರಾಷ್ಟ್ರಗಳ ಕಲ್ಯಾಣಕ್ಕೆ ಇಂಧನ ಭದ್ರತೆಯು ನಿರ್ಣಾಯಕ ಅಡಿಪಾಯವಾಗಿದೆ ಎಂದು ಬ್ರಿಕ್ಸ್ ನಾಯಕರು ಹೇಳಿದ್ದಾರೆ.

ನವದೆಹಲಿಯಲ್ಲಿ ನಡೆದ ಎರಡು ದಿನಗಳ ಬ್ರಿಕ್ಸ್ ಶೃಂಗಸಭೆಯಲ್ಲಿ, ಸದಸ್ಯ ರಾಷ್ಟ್ರಗಳು ಇಂಧನ ಮಾರುಕಟ್ಟೆಯ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವ ಮತ್ತು ವೈವಿಧ್ಯಮಯ ಮೂಲಗಳಿಂದ ಅಡೆತಡೆಯಿಲ್ಲದ ಇಂಧನ ಪೂರೈಕೆಯನ್ನು ಕಾಯ್ದುಕೊಳ್ಳುವ ಮತ್ತು ನಿರ್ಣಾಯಕ ಇಂಧನ ಮೂಲಸೌಕರ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಇಂಧನ ಭದ್ರತೆಯನ್ನು ಹೆಚ್ಚಿಸುವ ಅಗತ್ಯವನ್ನು ಪ್ರತಿಪಾದಿಸಿದರು.

ಶೃಂಗಸಭೆಯ ಸಂದರ್ಭದಲ್ಲಿ, ತಂತ್ರಜ್ಞಾನ ಮತ್ತು ನಿರ್ಣಾಯಕ ಖನಿಜಗಳು ಪ್ರಗತಿಗೆ ಅಡ್ಡಿಯಾಗಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಸಿದ್ದರು.

---

ತತ್ವಜ್ಞಾನಿ ತಿರುವಳ್ಳುವರ್ ರಚಿಸಿರುವ ತಿರುಕ್ಕುರುಳ್ ಅನ್ನು ದೇಶ ವಿದೇಶಗಳಲ್ಲಿ ಪ್ರಚಾರ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್ ಶ್ಲಾಘಿಸಿದ್ದಾರೆ.

ಬ್ರಿಕ್ಸ್ ಶೃಂಗಸಭೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ತಿರುಕ್ಕುರುಳ್‌ನ ರಷ್ಯನ್ ಭಾಷೆಯ ಅನುವಾದದ ಪ್ರತಿಯನ್ನು ಪ್ರಧಾನಿ ನೀಡಿದ್ದಕ್ಕೆ ಮುರುಗನ್ ಧನ್ಯವಾದ ತಿಳಿಸಿದ್ದಾರೆ.

---

ಮುಂಬೈನ ಥಾಣೆಯಲ್ಲಿ ಗಣೇಶೋತ್ಸವ ಅಂಗವಾಗಿ ಸುಪ್ರಸಿದ್ಧ ಮರಳು ಶಿಲ್ಪ ಕಲಾವಿದ ಸುದರ್ಶನ್ ಪಟ್ನಾಯಕ್ ಅವರು ಪಂಚಮುಖಿ ಗಣೇಶನ ಸುಂದರ ಮರಳು ಶಿಲ್ಪವನ್ನು ರಚಿಸಿದ್ದಾರೆ.

ಗಣೇಶನ ಪಂಚಮುಖಿ ರೂಪದ ಈ ಮರಳು ಶಿಲ್ಪವು ಸಾರ್ವಜನಿಕರ ಗಮನ ಸೆಳೆಯುತ್ತಿದೆ.

---

ಭಾರತೀಯ ರಿಸರ್ವ್ ಬ್ಯಾಂಕ್ ಹೊಸ ಚೌಕಟ್ಟೊಂದನ್ನು ಪ್ರಸ್ತಾಪಿಸಿದೆ. ಇದರಡಿ ಒಂದು ಸಾವಿರ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಅಸಾಮಾನ್ಯ ವರ್ಗಾವಣೆಗಳು 'ಮ್ಯೂಲ್ ಖಾತೆಗಳು' ಅಥವಾ ಸೈಬರ್ ವಂಚನೆಗೆ ಸಂಬಂಧಿಸಿರಬಹುದು ಎಂದು ಗುರುತಿಸಲ್ಪಟ್ಟಾಗ, ಬ್ಯಾಂಕುಗಳು ಇಡೀ ಖಾತೆಯನ್ನು ಸ್ಥಗಿತಗೊಳಿಸುವ ಬದಲು ಕೇವಲ ವಿವಾದಿತ ವಹಿವಾಟಿನ ಮೊತ್ತವನ್ನು ಮಾತ್ರ ತಾತ್ಕಾಲಿಕವಾಗಿ ತಡೆಹಿಡಿಯಲಿವೆ.

ಗ್ರಾಹಕರ ಘೋಷಿತ ಪ್ರೊಫೈಲ್‌ಗೆ ಹೊಂದಿಕೆಯಾಗದ, ಹಠಾತ್ ಅಥವಾ ತಿಳಿದಿರುವ ಸೈಬರ್-ವಂಚನೆ ಜಾಲಕ್ಕೆ ಸಂಬಂಧಿಸಿದ ವರ್ಗಾವಣೆಗಳನ್ನು ಗುರುತಿಸಲು ಬ್ಯಾಂಕುಗಳು ಕೃತಕ ಬುದ್ಧಿಮತ್ತೆ ಆಧಾರಿತ ವಹಿವಾಟು ಮೇಲ್ವಿಚಾರಣಾ ವ್ಯವಸ್ಥೆಗಳನ್ನು ಬಳಸಲು ಪ್ರಸ್ತಾಪಿಸಿದೆ.

ಈ ಕರಡು ನಿರ್ದೇಶನಗಳು 2027ರ ಏಪ್ರಿಲ್ 1ರಿಂದ ಜಾರಿಗೆ ಬರಲಿವೆ, ಆದಾಗ್ಯೂ ಬ್ಯಾಂಕುಗಳು ಅವುಗಳನ್ನು ಮೊದಲೇ ಅಳವಡಿಸಿಕೊಳ್ಳಬಹುದು. ಆರ್.ಬಿ.ಐ ಪ್ರಕಾರ, ಈ ಚೌಕಟ್ಟು ಸುಪ್ರೀಂ ಕೋರ್ಟ್‌ನ ಆಗಸ್ಟ್ 4ರ ಆದೇಶದ ಅನುಸಾರ ಜಾರಿಗೊಳಿಸಲಾಗುತ್ತಿದೆ.

---

ಸೇನೆಯ ಅವಿರತ ಪ್ರಯತ್ನಗಳಿಂದಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಪರಿಸ್ಥಿತಿಯು ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ ಎಂದು ಸರ್ಕಾರ ತಿಳಿಸಿದೆ.

ರಕ್ಷಣಾ ಸಚಿವಾಲಯದ ಇತ್ತೀಚಿನ ವಾರ್ಷಿಕ ವರದಿ ಪ್ರಕಾರ, ಈ ಪ್ರಯತ್ನಗಳು ಹಿಂಸಾಚಾರದಲ್ಲಿ ಗಮನಾರ್ಹ ಇಳಿಕೆ, ಪ್ರತಿಭಟನೆಗಳ ಕಡಿತ ಮತ್ತು ಕಲ್ಲು ತೂರಾಟದ ಘಟನೆಗಳು ಶೂನ್ಯ ಮಟ್ಟಕ್ಕೆ ತಲುಪಲು ಕಾರಣವಾಗಿವೆ. 'ಆಪರೇಷನ್ ಸಿಂಧೂರ್' ಸಮಯದಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ನಿಯಂತ್ರಣ ರೇಖೆಯ ಉದ್ದಕ್ಕೂ ಪರಿಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆಗಳಾಗಿದ್ದವು. ಆದಾಗ್ಯೂ, ಕಳೆದ ವರ್ಷದ ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕರ ಮಟ್ಟದ ಮಾತುಕತೆಗಳ ನಂತರ, ಪರಿಸ್ಥಿತಿ ಬಹುತೇಕ ಸ್ಥಿರಗೊಂಡಿದೆ; ಆದರೂ ಅನಿಶ್ಚಿತತೆಯ ಅಂಶಗಳು ಮುಂದುವರಿದಿವೆ.

---

ಸೌದಿ ಅರೇಬಿಯಾದ ಇಂಧನ ಮೂಲಸೌಕರ್ಯಗಳು ಮತ್ತು ಪಶ್ಚಿಮ ಏಷ್ಯಾದಲ್ಲಿನ ಹಡಗುಗಳ ಮೇಲಿನ ದಾಳಿಗಳು ಪೂರೈಕೆಯ ಕುರಿತಾದ ಆತಂಕವನ್ನು ಹೆಚ್ಚಿಸಿದ ಪರಿಣಾಮವಾಗಿ, ಇಂದು ಜಾಗತಿಕ ಕಚ್ಚಾ ತೈಲ ಬೆಲೆಗಳು ಶೇಕಡಾ ಮೂರಕ್ಕಿಂತ ಹೆಚ್ಚು ಏರಿಕೆಯಾಗಿವೆ.

ದಿನದ ವಹಿವಾಟಿನಲ್ಲಿ 'ಬ್ರೆಂಟ್ ಕಚ್ಚಾ ತೈಲ'ದ ಬೆಲೆಯು ಪ್ರತಿ ಬ್ಯಾರೆಲ್‌ಗೆ 108 ಡಾಲರ್, 22 ಸೆಂಟ್‌ಗಳಷ್ಟಿದ್ದು, ಶೇಕಡಾ 3.4 ರಷ್ಟು ಏರಿಕೆ ಕಂಡಿತ್ತು. ಅದೇ ವೇಳೆ, 'ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೇಟ್' ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 103 ಡಾಲರ್ ಮತ್ತು 11 ಸೆಂಟ್‌ಗಳಷ್ಟಿದ್ದು, ಶೇಕಡಾ 3 ರಷ್ಟು ಏರಿಕೆಯಾಗಿದೆ.

---

ಮೆಕ್ಸಿಕೋದ ಸಾಲ್ಟಿಲ್ಲೊದಲ್ಲಿ ನಡೆದ 2026ರ ಬಿಲ್ಲುಗಾರಿಕೆ ವಿಶ್ವಕಪ್‌ನಲ್ಲಿ ಧೀರಜ್ ಬೊಮ್ಮದೇವರ ಚಿನ್ನದ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದಾರೆ.
ಇದರೊಂದಿಗೆ ಬಿಲ್ಲುಗಾರಿಕೆ ವಿಶ್ವಕಪ್‌ನ ರಿಕರ್ವ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಪುರುಷ ಬಿಲ್ಲುಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

---

ಆಂಧ್ರಪ್ರದೇಶದ ಗುಂಟೂರಿನಲ್ಲಿ ನಡೆದ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಬಾಲಕಿಯರ ತಂಡಗಳು ಅದ್ಭುತ ಪ್ರದರ್ಶನ ನೀಡಿ ಮೂರು ವಿಭಾಗಗಳಲ್ಲೂ ಚಾಂಪಿಯನ್ ಪಟ್ಟ ಅಲಂಕರಿಸಿವೆ.

14, 17 ಹಾಗೂ 19 ವರ್ಷ ಒಳಗಿನ ಬಾಲಕಿಯರ ವಿಭಾಗಗಳಲ್ಲಿ ಕರ್ನಾಟಕದ ತಂಡಗಳು ಎದುರಾಳಿ ತಂಡಗಳನ್ನು ಮಣಿಸಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಗೆದ್ದು ರಾಜ್ಯಕ್ಕೆ ಕೀರ್ತಿ ತಂದಿವೆ.

ತಂಡದ ನಾಯಕಿ ಋಷಿಮೋಹನ ಗೌಡ, ತರಬೇತುದಾರರ ಸಂತೋಷ್, ಮುನಿರಾಜು, ಮುನಿಕೃಷ್ಣ ಅವರು ತಂಡದ ಗೆಲುವಿಗೆ ಸ್ಫೂರ್ತಿಯಾಗಿದ್ದರು. 14 ವರ್ಷ ಒಳಗಿನ ತಂಡವನ್ನು ಋಷಿ ಮೋಹನ ಗೌಡ, 17 ವರ್ಷ ಒಳಗಿನ ತಂಡವನ್ನು ಆದ್ಯ, 19 ವರ್ಷ ಒಳಗಿನ ತಂಡವನ್ನು ಪರ್ಲ್ ಚಾವಿ ಮುನ್ನಡೆಸಿದರು.

**ಚಿಲ್ಲರೆ ಹಣದುಬ್ಬರವು ಆಗಸ್ಟ್‌ನಲ್ಲಿ ಶೇಕಡಾ 4.82ಕ್ಕೆ ಏರಿಕೆಯಾಗಿದ್ದು, ಈ ವರ್ಷ ಸತತ ಮೂರನೇ ತಿಂಗಳು ಭಾರತೀಯ ರಿಸರ್ವ್ ಬ್ಯಾಂಕ್‌ನ ಶೇಕಡಾ 4ರ ಗುರಿಗಿಂತ ಹೆಚ್ಚಿನ ಮಟ್ಟದಲ್ಲಿಯೇ ಮುಂದುವರಿದಿದೆ. ಆಹಾರ ಪದಾರ್ಥಗಳ ಬೆಲೆಗಳು ಏರಿಕೆಯಾದ ಕಾರಣ ಜುಲೈನಲ್ಲಿ ದಾಖಲಾಗಿದ್ದ ಶೇಕಡಾ 4.45ರ ಮಟ್ಟಕ್ಕಿಂತ ಆಗಸ್ಟ್‌ನ ಹಣದುಬ್ಬರ ದರ ಹೆಚ್ಚಾಗಿದೆ.**

**ಮುಕ್ತಾಯ**